## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ಕೆ.ಅಬ್ದುಲ್ ಲಬ್ಬರ್ (ವಿಧಾನಸಭಾ ಕ್ಷೇತ್ರ) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (413)-363 |
| 3 | ಉತ್ತರಿಸಬೇಕಾದ ದಿನಾಂಕ | : | 30-01-2026 |
| 4 | ಉತ್ತರಿಸುವವರು | : | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನರೇಗಾ ಯೋಜನೆಯಡಿ ಗ್ರಾಮೀಣ ಕಾರ್ಮಿಕರಿಗೆ ನೀಡುತ್ತಿರುವ ಯೋಜನೆಗಳು ಯಾವವು; ರಾಜ್ಯದಲ್ಲಿ ನರೇಗಾ ಯೋಜನೆಯನ್ನು ಪಡೆಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು) | **ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿಯಲ್ಲಿ**<br>1. ನೀಡಲಾದ ಜಾಬ್‌ಕಾರ್ಡ್‌ಗಳ ಒಟ್ಟು ಸಂಖ್ಯೆ : **79.49**ಲಕ್ಷಗಳು<br>2. ಸಕ್ರಿಯ ಜಾಬ್‌ಕಾರ್ಡ್‌ಗಳ ಒಟ್ಟು ಸಂಖ್ಯೆ **39.97** ಲಕ್ಷಗಳು.<br>3. ನೋಂದಾಯಿತ ಕಾರ್ಮಿಕರ ಒಟ್ಟು ಸಂಖ್ಯೆ **172.38** ಲಕ್ಷಗಳು.<br>4. ಸಕ್ರಿಯ ಕಾರ್ಮಿಕರ ಒಟ್ಟು ಸಂಖ್ಯೆ **69.09** ಲಕ್ಷಗಳು.<br><br>ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ |
| (ಆ) | ಮಹಾತ್ಮಗಾಂಧಿ ನರೇಗಾ ಯೋಜನೆಯಡಿಯಲ್ಲಿ ಉದ್ಯೋಗ ಚೀಟಿ ಪಡೆಯಲು ಇರುವ ಮಾನದಂಡಗಳು ಯಾವುವು; ನರೇಗಾ ಕಾರ್ಮಿಕರಿಗೆ ದಿನ ಕೂಲಿ ಮೊತ್ತವನ್ನು ಯಾವ ಮನದಂಡಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ; ಪ್ರಸ್ತುತ ನೀಡುತ್ತಿರುವ ದಿನ ಕೂಲಿ ಮೊತ್ತವೆಷ್ಟು; | ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಅಕುಶಲ ಕೆಲಸ ಪಡೆಯಲು ಇಚ್ಛಿಸಿದಲ್ಲಿ ಕಡ್ಡಾಯವಾಗಿ ಉದ್ಯೋಗ ಚೀಟಿಯನ್ನು ಹೊಂದಬೇಕಾಗಿರುತ್ತದೆ. ಉದ್ಯೋಗ ಚೀಟಿಯನ್ನು ಪಡೆಯಲು ಕುಟುಂಬವು ನರೇಗಾ ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿ 2013ರಂತೆ ಅಧ್ಯಾಯ-3 ಕಂಡಿಕೆ 3.1.2 ರಲ್ಲಿ ವಿವರಿಸಿರುವಂತೆ ಈ ಕೆಳಕಂಡ ಪ್ರಮುಖ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ.<br><br>• ಅರ್ಜಿದಾರರು ಆಯಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಾಸಿಸುವ ಸ್ಥಳೀಯ ನಿವಾಸಿಯಾಗಿರಬೇಕು. (ಸ್ಥಳೀಯ ನಿವಾಸಿ ಎಂದು ಗುರುತಿಸುವ ದೃಢೀಕೃತ ಪ್ರತಿಗಳು)<br>• ಕೆಲಸ ಮಾಡಲು ಬಯಸುವ ಕುಟುಂಬದ ಸದಸ್ಯರು ಕನಿಷ್ಠ 18 ವರ್ಷ ಪೂರೈಸಿರಬೇಕು.<br>• ಅಕುಶಲ ದೈಹಿಕ ಕೆಲಸ (Unskilled Manual Labour) ಮಾಡಲು ಸಿದ್ಧರಿರಬೇಕು.<br>• ಉದ್ಯೋಗ ಚೀಟಿಯನ್ನು ಒಂದು ಕುಟುಂಬದ ಹೆಸರಿನಲ್ಲಿ ನೀಡಲಾಗುತ್ತದೆ. ಕುಟುಂಬದ ಎಲ್ಲ ವಯಸ್ಕ ಸದಸ್ಯರು ಇದರಲ್ಲಿ ನೋಂದಾಯಿಸಿಕೊಳ್ಳಬಹುದು.<br>ಅರ್ಜಿದಾರರು ಸಲ್ಲಿಸಿದ ದಾಖಲಾತಿಯನ್ನು ಪರಿಶೀಲಿಸಿ 15 ದಿವಸದೊಳಗೆ ಉದ್ಯೋಗ ಚೀಟಿಯನ್ನು ವಿತರಿಸುವುದು. |

| | | |
|---|---|---|
| | | ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಕಾಯ್ದೆ 2005 ರ ಕಾರ್ಯಾಚರಣೆ ಮಾರ್ಗಸೂಚಿ 2013 ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.<br><br>ನರೇಗಾ ಕಾರ್ಮಿಕರಿಗೆ ದಿನ ಕೂಲಿ ಮೊತ್ತವನ್ನು ಕೇಂದ್ರ ಸರ್ಕಾರವು ಪ್ರತೀ ವರ್ಷ ನಿಗಧಿಪಡಿಸುತ್ತಿದ್ದು, ಪ್ರಸ್ತುತ ಸಾಲಿನ ಕೂಲಿ ದರ ರೂ.370/-ಗಳು ಇರುತ್ತದೆ. |
| ಇ) | ನರೇಗಾ ಯೋಜನೆಯೆಂಬ ಕಾಯ್ದೆಯನ್ನು ಪ್ರಸ್ತುತ ಕೇಂದ್ರ ಸರ್ಕಾರ ವಿಬಿ ರಾಮ್ ಜಿ ಕಾಯೆ ಎಂದು ಬದಲಾಯಿಸಲು ಇರುವ ಪ್ರಮುಖ ಕಾರಣಗಳು ಯಾವುವು; ಬದಲಾವಣೆಯಿಂದ ಆಗುವ ವ್ಯತ್ಯಾಸಗಳು ಯಾವುವು: (ಸಂಪೂರ್ಣ ಮಾಹಿತಿ ಒದಗಿಸುವುದು) | ಮಹಾತ್ಮಾಗಾಂಧಿ ನರೇಗಾ ಯೋಜನೆಯೆಂಬ ಕಾಯ್ದೆಯನ್ನು ಪ್ರಸ್ತುತ ಕೇಂದ್ರ ಸರ್ಕಾರ ವಿ.ಬಿ.ಜಿ ರಾಮ್ ಜಿ ಕಾಯ್ದೆ ಎಂದು ಬದಲಾಯಿಸಲು ಇರುವ ಕಾರಣಗಳನ್ನು ಕೇಂದ್ರ ಸರ್ಕಾರವು ನೀಡಬೇಕಿರುತ್ತದೆ. ಬದಲಾವಣೆಯಿಂದಾಗುವ ವ್ಯತ್ಯಾಸವನ್ನು **ಅನುಬಂಧ -2** ರಲ್ಲಿ ಲಗತ್ತಿಸಿದೆ. |
| ಈ) | ಸದರಿ ಕಾಯ್ದೆ ಬದಲಾವಣೆಯಿಂದಾಗಿ ಸಾರ್ವಜನಿಕರಲ್ಲಿ ತೀವ್ರ ಗೊಂದಲ ಸೃಷ್ಟಿಯಾಗಿದ್ದು, ಈ ಗೊಂದಲಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು? | ವಿಶೇಷ ವಿಧಾನಮಂಡಲದ ಅಧಿವೇಶನದಲ್ಲಿ ಚರ್ಚಿಸಲಾಗುತ್ತಿದೆ. |

**ಸಂಖ್ಯೆ: ಗ್ರಾಅಪ/40(19)/ಉಖಾಯೋ/2026, 2037839**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು

ಅನುಬಂಧ-1

| ನರೇಗಾ ಯೋಜನೆಯಡಿ ಗ್ರಾಮೀಣ ಕಾರ್ಮಿಕರ ಮಾಹಿತಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ (413)-363 | | | | | |
|---|---|---|---|---|---|
| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು ಉದ್ಯೋಗ ಚೀಟಿ (ಲಕ್ಷ ದಲ್ಲಿ) | ಸಕ್ರಿಯ ಜಾಬ್ ಕಾರ್ಡ್ | ನೋಂದಾಯಿತ ಕಾರ್ಮಿಕರ ಸಂಖ್ಯೆ | ಸಕ್ರಿಯ ಕಾರ್ಮಿಕರ ಸಂಖ್ಯೆ |
| 1 | ಬಾಗಲಕೊಟೆ | 2.73 | 1.42 | 5.38 | 2.36 |
| 2 | ಬಳ್ಳಾರಿ | 1.87 | 1.33 | 4.99 | 2.88 |
| 3 | ಬೆಳಗಾವಿ | 7.89 | 3.72 | 15.55 | 5.64 |
| 4 | ಬೆಂಗಳೂರು | 0.59 | 0.05 | 1.3 | 0.08 |
| 5 | ಬೆಂಗಳೂರು (ನ) | 0.59 | 0.05 | 1.3 | 0.08 |
| 6 | ಬೆಂಗಳೂರು (ಗ್ರಾ) | 1.18 | 0.52 | 2.53 | 0.88 |
| 7 | ಬಿದರ್ | 2.47 | 1.41 | 4.45 | 2.1 |
| 8 | ಚಾಮರಾಜನಗರ | 2.26 | 1.01 | 5.13 | 1.67 |
| 9 | ಚಿಕ್ಕಬಳ್ಳಾಪುರ | 2.15 | 1.11 | 4.91 | 1.9 |
| 10 | ಚಿಕ್ಕಮಂಗಳೂರು | 1.79 | 0.88 | 3.96 | 1.64 |
| 11 | ಚಿತ್ರದುರ್ಗ | 3.35 | 1.65 | 7.72 | 2.79 |
| 12 | ದಕ್ಷಿಣ ಕನ್ನಡ | 1.69 | 0.59 | 3.53 | 1.03 |
| 13 | ದಾವಣಗೆರೆ | 2.36 | 1.14 | 5.18 | 2.06 |
| 14 | ದಾರವಾಡ | 1.73 | 0.78 | 4.06 | 1.42 |
| 15 | ಗದಗ | 1.7 | 1.19 | 3.95 | 2.51 |
| 16 | ಹಾಸನ | 2.79 | 1.52 | 6.2 | 2.85 |
| 17 | ಹಾವೇರಿ | 2.87 | 1.44 | 6.23 | 2.76 |
| 18 | ಕಲಬುರ್ಗಿ | 4.28 | 2.29 | 8.48 | 3.37 |
| 19 | ಕೊಡಗು | 0.88 | 0.24 | 1.89 | 0.4 |
| 20 | ಕೋಲಾರ | 2.44 | 1.18 | 5.69 | 1.88 |
| 21 | ಕೊಪ್ಪಳ | 3.14 | 2.25 | 7.34 | 4.13 |
| 22 | ಮಂಡ್ಯ | 3.37 | 1.2 | 7.12 | 2 |
| 23 | ಮೈಸೂರು | 3.43 | 1.19 | 8.25 | 2.14 |
| 24 | ರಾಯಚೂರು | 3.73 | 2.84 | 7.6 | 4.85 |
| 25 | ಶಿವಮೊಗ್ಗ | 2.44 | 1.35 | 5.56 | 2.51 |
| 26 | ತುಮಕೂರು | 4.02 | 2.01 | 8.68 | 3.63 |
| 27 | ಉಡುಪಿ | 1.25 | 0.43 | 2.52 | 0.76 |
| 28 | ಉತ್ತರ ಕನ್ನಡ | 2.06 | 0.8 | 4.55 | 1.4 |
| 29 | ವಿಜಯನಗರ | 2.35 | 1.6 | 5.94 | 3.23 |
| 30 | ವಿಜಯಪುರ | 3.43 | 1.38 | 7.34 | 2.12 |
| 31 | ಯಾದಗಿರಿ | 2.66 | 1.4 | 5.05 | 2.02 |
| | **ಒಟ್ಟು** | **79.49** | **39.97** | **172.38** | **69.09** |

P. G.

ಅನುಬಂಧ 1

## ಮಹಾತ್ಮಗಾಂಧಿ ನರೇಗಾ ಯೋಜನೆ ಹಾಗೂ ವಿಬಿಜಿರಾಮ್‌ಜಿ ಯೋಜನೆ ತುಲನಾತ್ಮಕ ಸಂಕ್ಷಿಪ್ತ ಮಾಹಿತಿ

| ವಿಷಯ | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯಲ್ಲಿನ **(MGNREGA)** ಹಿಂದಿನ ನಿಬಂಧನೆಗಳು | ವಿಕಸಿತ ಭಾರತ ಗ್ರಾಮ್ (ಜಿ) ಮೂಲಕ ಪರಿಚಯಿಸಲಾದ ಹೊಸ ಬದಲಾವಣೆ |
|---|---|---|
| 1. ಕಾಯ್ದೆಯ ಪ್ರಾದೇಶಿಕ ವ್ಯಾಪ್ತಿ | MGNREGA ಕಾಯ್ದೆಯ ಸೆಕ್ಷನ್ 3(1) ರ ಪ್ರಕಾರ, ಈ ಕಾಯ್ದೆಯನ್ನು ಹಂತ-ಹಂತವಾಗಿ ಜಾರಿಗೆ ತರಲಾಗುವುದು ಎಂದು ತಿಳಿಸಲಾಗಿತ್ತು (ಅಂದರೆ, 'ವಿವಿಧ ರಾಜ್ಯಗಳಿಗೆ ಅಥವಾ ರಾಜ್ಯದ ವಿವಿಧ ಪ್ರದೇಶಗಳಿಗೆ ಬೇರೆ ಬೇರೆ ದಿನಾಂಕಗಳನ್ನು ನಿಗಧಿಪಡಿಸುವುದು). ಆದಾಗ್ಯೂ ಸೆಕ್ಷನ್1(3) ರ ಅಡಿಯಲ್ಲಿ, ಕಾಯ್ದೆಯು ಜಾರಿಗೆ ಬಂದ 5 ವರ್ಷಗಳ ಒಳಗಾಗಿ ಎಲ್ಲಾ ಗ್ರಾಮೀಣ ಪ್ರದೇಶಗಳಿಗೂ ಅನ್ವಯವಾಗುವುದು ಕಡ್ಡಾಯವಾಗಿತ್ತು | ಕೇಂದ್ರ ಸರ್ಕಾರವು ಅಧಿಸೂಚಿಸುವ ಪ್ರದೇಶಗಳಲ್ಲಿ ರಾಜ್ಯ ಸರ್ಕಾರವು ಈ ಕಾಯ್ದೆಯನ್ನು ಜಾರಿಗೊಳಿಸತಕ್ಕದ್ದು ಎಂದು ಸೆಕ್ಷನ್ 5(1) ತಿಳಿಸುತ್ತದೆ.<br>ಆದಾಗ್ಯೂ ಕಾಯ್ದೆಯು ಜಾರಿಗೆ ಬಂದ ನಂತರದ ಯಾವುದೇ ನಿರ್ದಿಷ್ಟ ಕಾಲಮಿತಿಯೊಳಗೆ, ಈ ಕಾಯ್ದೆಯು ದೇಶದ ಎಲ್ಲಾ ಗ್ರಾಮೀಣ ಪ್ರದೇಶಗಳಿಗೂ ಅನ್ವಯವಾಗತಕ್ಕದ್ದು ಎಂದು ಕಡ್ಡಾಯಗೊಳಿಸಿರುವುದಿಲ್ಲ. |
| 2. ರಾಜ್ಯ ಸರ್ಕಾರಗಳ ಹಕ್ಕುಗಳು ಮತ್ತು ಅಧಿಕಾರಗಳ ಕಡಿತ ಹಾಗೂ ಅದೇ ಸಮಯದಲ್ಲಿ ಕೇಂದ್ರ ಸರ್ಕಾರದ ಅಧಿಕಾರ ವ್ಯಾಪ್ತಿಯ ಅತಿಕ್ರಮಣ. | 2. ಅನುಸೂಚಿ 1, ಸೆಕ್ಷನ್ 4(IV)(ix) ರ ಅಡಿಯಲ್ಲಿ, ಅನುಮತಿಸಬಹುದಾದ ಕಾಮಗಾರಿಗಳ ಪಟ್ಟಿಗೆ ಹೊಸ ಕಾಮಗಾರಿಗಳನ್ನು ಸೇರಿಸುವಾಗ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚನೆ ನಡೆಸುವುದು ಕಡ್ಡಾಯವಾಗಿತ್ತು. | ಅನುಸೂಚಿ 1, ಸೆಕ್ಷನ್ 4(d)(3) ರ ಅನ್ವಯ, ವಿಕಸಿತ ಭಾರತ ಗ್ರಾಮ್ (ಜಿ) ಅಡಿಯಲ್ಲಿ ಅನುಮತಿಸಬಹುದಾದ ಕಾಮಗಾರಿಗಳ ಪಟ್ಟಿಗೆ ರಾಜ್ಯ ಸರ್ಕಾರಗಳನ್ನು ಸಮಾಲೋಚಿಸದೆಯೇ ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ಹೊಸ ಕಾಮಗಾರಿಗಳನ್ನು ಸೇರಿಸಬಹುದು ಎಂದು ಈಗ ತಿಳಿಸಲಾಗಿದೆ. |
| | 2.2 ಸೆಕ್ಷನ್ 22(2) ರ ಪ್ರಕಾರ, ಯೋಜನೆಯ ಸಾಮಗ್ರಿ ವೆಚ್ಚದ 1/4 (ನಾಲ್ಕನೇ ಒಂದು) ಭಾಗವನ್ನು ರಾಜ್ಯ ಸರ್ಕಾರವು ಭರಿಸಬೇಕು (ಕೂಲಿ ಮತ್ತು ಆಡಳಿತಾತ್ಮಕ ವೆಚ್ಚವನ್ನು ಕೇಂದ್ರ ಸರ್ಕಾರವು ಭರಿಸುತ್ತದೆ [22(1)]. | ವಿಕಸಿತ ಭಾರತ ಗ್ರಾಮ್ (ಜಿ) ನ ಸೆಕ್ಷನ್ 22(2) ಮತ್ತು 22(4) ರ ಅಡಿಯಲ್ಲಿ, ಕೇಂದ್ರ ಸರ್ಕಾರವು ನಿಗದಿಪಡಿಸಿದ ನಿಯಮಾತ್ಮಕ ಹಂಚಿಕೆಯ (Normative Allocation) ಶೇಕಡಾ 40 ರಷ್ಟು ಹಣವನ್ನು ಒದಗಿಸಲು ರಾಜ್ಯ ಸರ್ಕಾರಗಳ ಮೇಲೆ ಕಾನೂನುಬದ್ಧ ಬಾಧ್ಯತೆಯನ್ನು ಹೇರಲಾಗಿದೆ |
| | 2.3 ಅಂತಹ ಯಾವುದೇ ನಿಬಂಧನೆಗಳು (Provision) ಅಸ್ತಿತ್ವದಲ್ಲಿರಲಿಲ್ಲ | ವಿಕಸಿತ ಭಾರತ ಗ್ರಾಮ್ (ಜಿ) ನ ಸೆಕ್ಷನ್ 22(5) ರ ಪ್ರಕಾರ, ಕೇಂದ್ರ ಸರ್ಕಾರವು ನಿರ್ಧರಿಸಿದ ನಿಯಮಾತ್ಮಕ ಹಂಚಿಕೆಗಿಂತ (Normative Allocation) ಹೆಚ್ಚಿನದಾಗಿ ರಾಜ್ಯ ಸರ್ಕಾರವು ಮಾಡುವ ಯಾವುದೇ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸತಕ್ಕದ್ದು. ಅಂತಹ ವೆಚ್ಚವನ್ನು |

| | | |
|---|---|---|
| | | ಕೇಂದ್ರ ಸರ್ಕಾರವು ಸೂಚಿಸಬಹುದಾದ ವಿಧಾನ ಮತ್ತು ಪ್ರಕ್ರಿಯೆಯನು ಅನುಸಾರವೇ ಭರಿಸಬೇಕಾಗುತ್ತದೆ. |
| | 2.4 ಅಂತಹ ಯಾವುದೇ ನಿಬಂಧನೆಗಳು (Provision) ಅಸ್ತಿತ್ವದಲ್ಲಿರಲಿಲ್ಲ | ಕಾಯ್ದೆಯ ಸೆಕ್ಷನ್ 4(5) ರ ಪ್ರಕಾರ, 'ವಸ್ತುನಿಷ್ಠ ಮಾನದಂಡಗಳ' (objective criteria) ಆಧಾರದ ಮೇಲೆ ರಾಜ್ಯವಾರು ನಿಯಮಾತ್ಮಕ ಹಂಚಿಕೆಗಳನ್ನು ನಿರ್ಧರಿಸುವ ವಿಶೇಷ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡಲಾಗಿದೆ. |
| | 2.5 ಕಾಯ್ದೆಯ ಸೆಕ್ಷನ್ 11 ರ ಅಡಿಯಲ್ಲಿ, ಕೇಂದ್ರ ಉದ್ಯೋಗ ಖಾತರಿ ಪರಿಷತ್ ನ(CEGC) ಕಾರ್ಯಗಳು ಮತ್ತು ಕರ್ತವ್ಯಗಳನ್ನು ಕಡ್ಡಾಯಗೊಳಿಸಲಾಗಿದೆ. | ಸೆಕ್ಷನ್ 12(4) ರ ಅನ್ವಯ, ಕೇಂದ್ರ ಗ್ರಾಮೀಣ ಉದ್ಯೋಗ ಖಾತರಿ ಪರಿಷತ್ ನ(CGRGC) ಕಾರ್ಯಗಳು, ಜವಾಬ್ದಾರಿಗಳು ಮತ್ತು ಅದರ ಕಾರ್ಯನಿರ್ವಹಣೆಯ ವಿಧಾನಗಳನ್ನು (Modalities) ವಿವರಿಸುವ ಸಂಪೂರ್ಣ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕಿರುತ್ತದೆ. |
| | 2.6 ಅಂತಹ ಯಾವುದೇ ನಿಬಂಧನೆಗಳು (Provision) ಅಸ್ತಿತ್ವದಲ್ಲಿರಲಿಲ್ಲ | ಅನುಸೂಚಿ 1, ಸೆಕ್ಷನ್ 5 ರ ಅನ್ವಯ, ಒಗ್ಗೂಡಿಸುವಿಕೆ (Convergence) ಮತ್ತು ಸ್ಯಾಚುರೇಶನ್-ಆಧಾರಿತ ಯೋಜನೆಗಾಗಿ ಕೇಂದ್ರ, ರಾಜ್ಯ ಅಥವಾ ಸ್ಥಳೀಯ ಮಟ್ಟದ ಯಾವುದೇ ಯೋಜನೆಗಳನ್ನು ಅಧಿಸೂಚಿಸುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡಲಾಗಿದೆ. ಈ ಯೋಜನೆಗಳನ್ನು ವಿಕಸಿತ ಗ್ರಾಮ ಪಂಚಾಯತ್ ಯೋಜನೆಗಳಲ್ಲಿ (Viksit Gram Panchayat Plans) ಅಡಕಗೊಳಿಸಿರುವ ಏಕೀಕೃತ ಯೋಜನಾ ಪ್ರಕ್ರಿಯೆಯ ಅಡಿಯಲ್ಲಿ ತರತಕ್ಕದ್ದು. |
| | 2.7 ಕಾಯ್ದೆಯ ಸೆಕ್ಷನ್ 22 ರ ಅಡಿಯಲ್ಲಿ, ಕಾರ್ಯಕ್ರಮದ ಕೂಲಿ ವೆಚ್ಚದ (Wage Cost) ಶೇಕಡಾ 100 ರಷ್ಟನ್ನು ಕೇಂದ್ರ ಸರ್ಕಾರವೇ ಭರಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ಇದಲ್ಲದೆ, ಕಾರ್ಯಕ್ರಮದ ಸಾಮಗ್ರಿ ವೆಚ್ಚದ (Material Cost) ¾ ನೇ ಭಾಗದಷ್ಟು ಹಣವನ್ನು ಕೂಡ ಕೇಂದ್ರ ಸರ್ಕಾರವೇ ಭರಿಸಬೇಕಿತ್ತು. | ಕಾಯ್ದೆಯ ಸೆಕ್ಷನ್ 22 ರ ಪ್ರಕಾರ, ರಾಜ್ಯ ಸರ್ಕಾರಕ್ಕೆ ನೀಡಬೇಕಾದ ನಿಯಮಾತ್ಮಕ ಬಜೆಟ್ ಹಂಚಿಕೆಯನ್ನು (Normative budget allocation) ಕೇಂದ್ರ ಸರ್ಕಾರವೇ ನಿರ್ಧರಿಸುತ್ತದೆ. ಈ ಹಂಚಿಕೆಯಲ್ಲಿ ಕೇಂದ್ರ ಸರ್ಕಾರವು ಶೇಕಡಾ 60 ರಷ್ಟು ಹಣವನ್ನು ನೀಡಿದರೆ, ರಾಜ್ಯ ಸರ್ಕಾರವು ಶೇಕಡಾ 40 ರಷ್ಟು ಹಣವನ್ನು ಪಾವತಿಸುವುದು ಕಡ್ಡಾಯವಾಗಿದೆ. ಒಂದು ವೇಳೆ ರಾಜ್ಯ ಸರ್ಕಾರವು ಈ ನಿಗದಿತ ಬಜೆಟ್ ಹಂಚಿಕೆಗಿಂತ ಹೆಚ್ಚು ಹಣವನ್ನು ಖರ್ಚು ಮಾಡಿದರೆ, ಆ ಹೆಚ್ಚುವರಿ ವೆಚ್ಚವನ್ನು ರಾಜ್ಯವೇ ತನ್ನ ಸ್ವಂತ ನಿಧಿಯಿಂದ ಭರಿಸಬೇಕು. |
| 3. ಗ್ರಾಮ ಸಭೆಗಳು ಮತ್ತು ಗ್ರಾಮ ಪಂಚಾಯತ್‌ಗಳ ಹಕ್ಕುಗಳನ್ನು ಮೊಟಕುಗೊಳಿಸುವಿಕೆ | ಸೆಕ್ಷನ್ 16(1) ರ ಪ್ರಕಾರ, ಗ್ರಾಮ ಪಂಚಾಯತ್‌ಗಳು 'ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳ ಶಿಫಾರಸುಗಳ ಅನುಸಾರವಾಗಿ' ಕಾಯ್ದೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ಗುರುತಿಸುವುದು ಮತ್ತು ಅಂತಹ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು ಹಾಗೂ | ಸೆಕ್ಷನ್ 19(ಡಿ) ರ ಪ್ರಕಾರ, ಗ್ರಾಮ ಪಂಚಾಯತ್‌ಗಳು 'ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳ ಶಿಫಾರಸುಗಳನ್ನು ಪರಿಗಣಿಸಿದ ನಂತರವೇ' ಸ್ಯಾಚುರೇಶನ್ (ಪರಿಪೂರ್ಣತೆ) ಆಧಾರದ ಮೇಲೆ ವಿಕಸಿತ ಗ್ರಾಮ ಪಂಚಾಯತ್ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು. |

| | | |
|---|---|---|
| | ಅವುಗಳ ಮೇಲ್ವಿಚಾರಣೆ ಮಾಡುವುದನ್ನು ಕಡ್ಡಾಯಗೊಳಿಸಲಾಗಿತ್ತು. | |
| | ಸೆಕ್ಷನ್ 16(2) ರ ಪ್ರಕಾರ, ಯೋಜನೆಗಳನ್ನು ಗುರುತಿಸಿದ ನಂತರ, ಗ್ರಾಮ ಪಂಚಾಯತ್ ಒಂದು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದನ್ನು ಮತ್ತು ಕೆಲಸದ ಬೇಡಿಕೆ ಬಂದಾಗಲೆಲ್ಲಾ ಕೈಗೊಳ್ಳಬಹುದಾದ ಕಾಮಗಾರಿಗಳ ಗುಚ್ಛವನ್ನು (Shelf of works) ಸದಾ ಸಿದ್ಧವಾಗಿರಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ಅನುಸೂಚಿ 1, ಸೆಕ್ಷನ್ 14 ರ ಅನ್ವಯ, ಗ್ರಾಮ ಪಂಚಾಯತ್‌ನ ಈ ಕಾಮಗಾರಿಗಳ ಗುಚ್ಛವು (Shelf of works) ಆ ಪಂಚಾಯತ್‌ಗೆ ಅನುಮೋದಿಸಲಾದ ಕಾರ್ಮಿಕ ಬಜೆಟ್‌ಗಿಂತ (Labour Budget) ಕನಿಷ್ಠ ಎರಡು ಪಟ್ಟು ಹೆಚ್ಚಿರಬೇಕು. | ಈ ನಿಬಂಧನೆಯನ್ನು ತೆಗೆದುಹಾಕಲಾಗಿದೆ |
| | ಸೆಕ್ಷನ 16(3) ರ ಪ್ರಕಾರ, ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆ ಮತ್ತು ಸಿದ್ಧಪಡಿಸಿದ ಕಾಮಗಾರಿಗಳ ಗುಚ್ಛವನ್ನು (Shelf of works) ಹಾಗೂ ವಿವಿಧ ಕಾಮಗಾರಿಗಳ ಆದ್ಯತೆಯ ಕ್ರಮವನ್ನು ಪರಿಶೀಲನೆ ಮತ್ತು ಪ್ರಾಥಮಿಕ ಅನುಮೋದನೆಗಾಗಿ ಕಾರ್ಯಕ್ರಮ ಅಧಿಕಾರಿಗೆ (Programme Officer) ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. | ಈ ನಿಬಂಧನೆಯನ್ನು ತೆಗೆದುಹಾಕಲಾಗಿದೆ |
| | ಸೆಕ್ಷನ್ 16(2) ರ ಪ್ರಕಾರ, ಕಾರ್ಯಕ್ರಮ ಅಧಿಕಾರಿಯಿಂದ (Programme Officer) ಅನುಮೋದನೆ ದೊರೆತ ತಕ್ಷಣ ಗ್ರಾಮ ಪಂಚಾಯತ್ ಆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಾರಂಭಿಸಬಹುದಾಗಿತ್ತು. ಪ್ರಕರಣ 16(7) ರ ಅನ್ವಯ, ಈ ರೀತಿ ಅನುಮೋದನೆಗೊಂಡ ಯೋಜನೆಗಳೇ ಗ್ರಾಮ ಪಂಚಾಯತ್ ಅರ್ಜಿದಾರರಿಗೆ ಉದ್ಯೋಗಾವಕಾಶಗಳನ್ನು ಹಂಚಿಕೆ ಮಾಡಲು ಆಧಾರವಾಗಿದ್ದವು. | ಸೆಕ್ಷನ್ 19(i) ರ ಪ್ರಕಾರ, ಕಾರ್ಯಕ್ರಮ ಅಧಿಕಾರಿಯು (Programme Officer) 'ತಮಗೆ ಹಂಚಿಕೆ ಮಾಡಿದ' (Allotted) ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಮಾತ್ರ ಗ್ರಾಮ ಪಂಚಾಯತ್ ಹೊಂದಿರುತ್ತದೆ. |
| | ಅನುಸೂಚಿ 1, ಸೆಕ್ಷನ್ 9(1) ರ ಪ್ರಕಾರ, ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ಕನಿಷ್ಠ ಒಂದು ಅತಿ ಹೆಚ್ಚು ಕೂಲಿ ಆಧಾರಿತ ಸಾರ್ವಜನಿಕ ಕಾಮಗಾರಿಯನ್ನು | ಈ ನಿಬಂಧನೆಯನ್ನು ತೆಗೆದುಹಾಕಲಾಗಿದೆ |

| | | |
|---|---|---|
| | (Labour Intensive Public Work) ಯಾವಾಗಲೂ ಲಭ್ಯವಿರಿಸಿರಬೇಕು. ಇದರಲ್ಲಿ ಕನಿಷ್ಠ ಒಂದು ಕಾಮಗಾರಿಯು ವಿಶೇಷವಾಗಿ ಅಸುರಕ್ಷಿತ ಬುಡಕಟ್ಟು ಗುಂಪುಗಳಿಗೆ (PVTG) ಸೂಕ್ತವಾಗಿರಬೇಕು ಮತ್ತು ಕೆಲಸದ ಬೇಡಿಕೆಗೆ ಅನುಗುಣವಾಗಿ ಉದ್ಯೋಗ ನೀಡಲು ಅಂತಹ ಕಾಮಗಾರಿಗಳನ್ನು ಸದಾ ಮುಕ್ತವಾಗಿರಿಸುವುದು ಕಡ್ಡಾಯವಾಗಿತ್ತು. | |
| | ಕಾನೂನಿನ ಪ್ರಕಾರ, ಗ್ರಾಮ ಪಂಚಾಯತ್‌ಗಳಿಗೆ ಒದಗಿಸಬಹುದಾದ ನಿಧಿಯ ಮೊತ್ತದ ಮೇಲೆ ಯಾವುದೇ ಗರಿಷ್ಠ ಮಿತಿ (Cap) ಇರಲಿಲ್ಲ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸ್ವೀಕೃತವಾಗುವ ಕೆಲಸದ ಬೇಡಿಕೆಯನ್ನು ಪೂರೈಸಲು ಅಗತ್ಯವಿರುವ ಅನುದಾನವನ್ನು ಕ್ರೋಢೀಕರಿಸುವ ಅಧಿಕಾರ ಗ್ರಾಮ ಪಂಚಾಯತ್‌ಗಳಿಗೆ ಇತ್ತು. | ಈಗ ನಿಯಮಾತ್ಮಕ ಹಂಚಿಕೆ ಎಂಬ ಹೆಸರಿನಲ್ಲಿ ರಾಜ್ಯಕ್ಕೆ ಒದಗಿಸಬಹುದಾದ ಒಟ್ಟು ನಿಧಿಯ ಮೊತ್ತದ ಮೇಲೆ ಗರಿಷ್ಠ ಮಿತಿಯನ್ನು (Total Cap) ಹೇರಲಾಗಿದೆ. |
| 4. ಮೇಲ್ವಿಚಾರಣ ಪ್ರಾಧಿಕಾರ | ಕಾಯ್ದೆಯ ಸೆಕ್ಷನ್ 10, 11 ಮತ್ತು 12 ರ ಪ್ರಕಾರ, ಈ ಕಾಯ್ದೆಯ ಅನುಷ್ಠಾನವನ್ನು ಮೌಲ್ಯಮಾಪನ ಮಾಡಲು ಮತ್ತು ಮೇಲ್ವಿಚಾರಣೆ ಮಾಡಲು ಹಾಗೂ ಕ್ರಮವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಲು 'ಕೇಂದ್ರ ಮತ್ತು ರಾಜ್ಯ ಉದ್ಯೋಗ ಖಾತರಿ ಪರಿಷತ್‌ಗಳನ್ನು' (Central and State Employment Guarantee Councils) ಸ್ಥಾಪಿಸಲಾಗಿದೆ. ಕಾಯ್ದೆಯು ಈ ಪರಿಷತ್‌ಗಳ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳನ್ನು ಸಹ ನಿಗದಿಪಡಿಸಿದೆ. | ಕಾಯ್ದೆಯ ಸೆಕ್ಷನ್ 12 ಮತ್ತು 13 ರ ಅನ್ವಯ, ಕೇಂದ್ರ ಮತ್ತು ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಪರಿಷತ್‌ಗಳನ್ನು ಸ್ಥಾಪಿಸಲಾಗಿದೆ. ಆದರೆ, ಕೇಂದ್ರ ಗ್ರಾಮೀಣ ಉದ್ಯೋಗ ಖಾತರಿ ಪರಿಷತ್‌ನ ಕರ್ತವ್ಯಗಳು ಮತ್ತು ಕಾರ್ಯಗಳನ್ನು ಈ ಹೊಸ ಕಾಯ್ದೆಯಲ್ಲಿ ಎಲ್ಲಿಯೂ ನಿಗದಿಪಡಿಸಲಾಗಿಲ್ಲ. |
| 5. ಕೂಲಿ ದರ | ಕಾಯ್ದೆಯ ಪ್ರಕರಣ 6(1) ರ ಪ್ರಕಾರ, ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು (MoRD) ಪ್ರತಿ ರಾಜ್ಯಕ್ಕೆ ಪ್ರತ್ಯೇಕವಾದ ನರೇಗಾ ಕೂಲಿ ದರಗಳನ್ನು ಅಧಿಸೂಚಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ನಂತರ ಹೊರಡಿಸಲಾದ ಆದೇಶಗಳ ಅನ್ವಯ (S.O. 463(E), ದಿನಾಂಕ 26 ಫೆಬ್ರವರಿ 2013), ಈ ಕೂಲಿ ದರಗಳನ್ನು ಪ್ರತಿ ವರ್ಷ ಪರಿಷ್ಕರಿಸಬೇಕು ಮತ್ತು ಅವುಗಳನ್ನು ಹಣದುಬ್ಬರಕ್ಕೆ (CPI-AL - ಗ್ರಾಮೀಣ ಕೃಷಿ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ) | ಕಾಯ್ದೆಯ ಪ್ರಕರಣ 10ರ ಪ್ರಕಾರ, ಇನ್ನು ಮುಂದೆ ಕೇಂದ್ರ ಸರ್ಕಾರವೇ ಕೂಲಿ ದರವನ್ನು ಅಧಿಸೂಚಿಸುತ್ತದೆ; ಅಲ್ಲಿಯವರೆಗೆ ಮಹಾತ್ಮ ಗಾಂಧಿ ನರೇಗಾ (MGNREGA) ಕಾಯ್ದೆಯ ಸೆಕ್ಷನ್ 6ರ ಅಡಿಯಲ್ಲಿ ಈ ಹಿಂದೆ ಅಧಿಸೂಚಿಸಲಾದ ಕೂಲಿ ದರವೇ ಅನ್ವಯವಾಗುತ್ತದೆ. ಆದರೆ, ಈ ಹೊಸ ನಿಬಂಧನೆಯಲ್ಲಿ 'ಶಾಸನಬದ್ಧ ಕನಿಷ್ಠ ಕೂಲಿ'ಗೆ ಸಂಬಂಧಿಸಿದ ಯಾವುದೇ ಉಲ್ಲೇಖವನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. |

| | | |
|---|---|---|
| | ಅನುಗುಣವಾಗಿ ಹೊಂದಿಸಬೇಕು ಎಂದು ಸೂಚಿಸಲಾಗಿತ್ತು. ಪ್ರಕರಣ 6(2) ರ ಪ್ರಕಾರ, ಕೇಂದ್ರವು ಹೊಸ ದರಗಳನ್ನು ಅಧಿಸೂಚಿಸುವವರೆಗೆ, ರಾಜ್ಯದ ಶಾಸನಬದ್ಧ ಕನಿಷ್ಠ ಕೂಲಿಯೇ (Statutory Minimum Wage) ನರೇಗಾ ಕೂಲಿ ಎಂದು ಪರಿಗಣಿಸಲ್ಪಡುತ್ತಿತ್ತು. | |
| 6. 60 ಕೂಲಿ ನಿರ್ಬಂಧ | ನರೇಗಾ (MGNREGA) ಯೋಜನೆಯನ್ನು ವರ್ಷದ ಯಾವುದೇ ಅವಧಿಯಲ್ಲೂ ಸ್ಥಗಿತಗೊಳಿಸಲು ಅವಕಾಶವಿರಲಿಲ್ಲ | ಕಾಯ್ದೆಯ ಪ್ರಕರಣ 6ರ ಪ್ರಕಾರ, ವರ್ಷವೊಂದರಲ್ಲಿ ಕೃಷಿ ಚಟುವಟಿಕೆಗಳು ಉತ್ತುಂಗದಲ್ಲಿರುವ ಸಮಯದಲ್ಲಿ 60 ದಿನಗಳ ಕಾಲ ಯೋಜನೆಯನ್ನು ಸ್ಥಗಿತಗೊಳಿಸಲು ಅವಕಾಶ ನೀಡಲಾಗಿದೆ. ಈ ಅವಧಿಯಲ್ಲಿ ಯೋಜನೆಯಡಿಯಲ್ಲಿ ಯಾವುದೇ ಕಾಮಗಾರಿಗಳನ್ನು ಅನುಷ್ಠಾನಿಸುವುದಿಲ್ಲ |
| 7. ಗುತ್ತಿಗೆದಾರರ ಪಾತ್ರ | ಕಾಯ್ದೆಯ ಸೆಕ್ಷನ್ 21ರ ಪ್ರಕಾರ, ಯಾವುದೇ ಸಂದರ್ಭದಲ್ಲೂ ಈ ಯೋಜನೆಯಡಿ ಗುತ್ತಿಗೆದಾರರನ್ನು (Contractors) ನೇಮಿಸಿಕೊಳ್ಳಲು ಅವಕಾಶವಿರಲಿಲ್ಲ. ಒಂದು ವೇಳೆ ನರೇಗಾ (NREGA) ನಿಧಿಯನ್ನು ಇತರ ಯೋಜನೆಗಳೊಂದಿಗೆ ಒಗ್ಗೂಡಿಸಿ (Convergence) ಅನುಷ್ಠಾನಿಸಿದರೂ ಸಹ, ಮಹಾತ್ಮ ಗಾಂಧಿ ನರೇಗಾ (MGNREGA) ಕಾಯ್ದೆಯಲ್ಲಿ ವಿಧಿಸಲಾದ ನಿಯಮಗಳು, ಷರತ್ತುಗಳು ಮತ್ತು ಮಾನದಂಡಗಳೇ ಅನ್ವಯವಾಗುತ್ತಿದ್ದವು. | ಕಾಯ್ದೆಯ ಸೆಕ್ಷನ್ 21(2)ರ ಪ್ರಕಾರ: ಯೋಜನೆಗಳ ಒಗ್ಗೂಡಿಸುವಿಕೆ (Convergence) ಸಂದರ್ಭದಲ್ಲಿ, ಕಾಮಗಾರಿಗಳ ಅನುಷ್ಠಾನದಲ್ಲಿ ಇತರ ಯೋಜನೆಗಳಿಂದ ಅನುದಾನ ಒದಗಿಸಿದ್ದರೆ, ಅಂತಹ ಕಾಮಗಾರಿಗಳ ಅನುಷ್ಠಾನವು ಆಯಾ ಯೋಜನೆಗಳ ನಿಯಮಗಳನ್ನೇ ಅನುಸರಿಸಬಹುದು. ಇದು ಅನುಷ್ಠಾನ ಇಲಾಖೆಗಳ ಯೋಜನೆಗಳಲ್ಲಿ ಅನುಮತಿ ಇದ್ದಲ್ಲಿ ಗುತ್ತಿಗೆದಾರರ ಬಳಕೆಯನ್ನೂ ಒಳಗೊಂಡಿರುತ್ತದೆ. |
| 8. ವಿಕಸಿತ ಭಾರತ ಪಿಎಂ ಗತಿಶಕ್ತಿ | ಕಾಯ್ದೆಯಡಿ ಅಂತಹ ಅವಕಾಶ ಇರುವುದಿಲ್ಲ | ಕಾಯ್ದೆಯ ಸೆಕ್ಷನ್ 4(3)ರ ಅನ್ವಯ, ಗ್ರಾಮ ಪಂಚಾಯತ್‌ಗಳು ಸಿದ್ಧಪಡಿಸಿದ 'ವಿಕಸಿತ್ ಗ್ರಾಮ ಪಂಚಾಯತ್ ಯೋಜನೆ'ಗಳನ್ನು (Viksit Gram Panchayat Plans) ಕಡ್ಡಾಯವಾಗಿ 'ಪಿಎಂ ಗತಿ ಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್' (PM Gati Shakti National Master Plan) ನೊಂದಿಗೆ ಸಂಯೋಜಿಸಬೇಕು ಎಂದು ಆದೇಶಿಸಲಾಗಿದೆ |
| 9. ಕಾನೂನುಬದ್ಧ ಕಾರ್ಯವಿಧಾನ | ಮಹಾತ್ಮ ಗಾಂಧಿ ನರೇಗಾ ಕಾಯ್ದೆಯನ್ನು 2005 ರಲ್ಲಿ ಸಂಸತ್ತಿನಲ್ಲಿ ಎಲ್ಲಾ ಪಕ್ಷಗಳ ಸರ್ವಾನುಮತದ ಒಪ್ಪಿಗೆಯೊಂದಿಗೆ ಅಂಗೀಕರಿಸಲಾಯಿತು. ಈ ಕಾನೂನಿನ ವಿರುದ್ಧ ಒಂದೇ ಒಂದು ಮತವೂ | VB-GRAM(G) ಕಾಯ್ದೆಯನ್ನು ಸಂಸತ್ತಿನ ಉಭಯ ಸದನಗಳಲ್ಲಿ ಕೇವಲ 72 ಗಂಟೆಗಳ ಒಳಗೆ ಮಂಡಿಸಿ, ಚರ್ಚಿಸಿ, ಅಂಗೀಕರಿಸಲಾಯಿತು. ಈ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರಗಳು, ಪಂಚಾಯತ್ ಪ್ರತಿನಿಧಿಗಳು ಮತ್ತು ಮುಖ್ಯವಾಗಿ ನರೇಗಾ |

| | | |
|---|---|---|
| | ದಾಖಲಾಗಿರಲಿಲ್ಲ. ಮಸೂದೆಯನ್ನು ಮಂಡಿಸಿದ ನಂತರ, ಅದನ್ನು ಗ್ರಾಮೀಣಾಭಿವೃದ್ಧಿಯ ಸಂಸದೀಯ ಸ್ಥಾಯಿ ಸಮಿತಿಗೆ ಕಳುಹಿಸಲಾಯಿತು ಮತ್ತು ಅಲ್ಲಿ ಸುಮಾರು ಒಂದು ವರ್ಷದ ಕಾಲ ಸುದೀರ್ಘ ಚರ್ಚೆಗಳು ಹಾಗೂ ಸಮಾಲೋಚನೆಗಳು ನಡೆದವು. | ಕಾರ್ಮಿಕರೊಂದಿಗೆ ಯಾವುದೇ ರೀತಿಯ ಸಮಾಲೋಚನೆಗಳನ್ನು ಆಯೋಜಿಸಿರಲಿಲ್ಲ. |